# ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಬೆಂಗಳೂರು

**KARNATAKA STATE DIPLOMA IN NURSING EXAMINATION BOARD, Bengaluru**

1st Floor, Library Block BMCRI Campus K R Road, Bengaluru-02, Ph: 080-26700074, 26700075

Email:ksdneb@gmail.com, Web: www.ksdneb.org

ಕ.ರಾ.ಶು.ಪ.ಮಂ./ಸಿಬ್ಬಂದಿ/ 07 /2026-27 Date: 25-08-2026

**2026-27 ನೇ ಸಾಲಿನ ಡಿಪ್ಲೋಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್ ಪ್ರವೇಶಕ್ಕಾಗಿ ಆನ್‌ಲೈನ್‌ನಲ್ಲಿ ಕೌನ್ಸಿಲಿಂಗ್ ಇಚ್ಛೆಗಳನ್ನು (Options) ನಮೂದಿಸುವ ಬಗ್ಗೆ ಪ್ರಮುಖ ಸೂಚನೆಗಳು ಹಾಗೂ ಮಾರ್ಗಸೂಚಿಗಳು**

ಡಿಪ್ಲೋಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಮಂಡಳಿಯು ಹೊರಡಿಸಿರುವ ಅಧಿಸೂಚನೆ ಹಾಗೂ ಡಿಪ್ಲೋಮಾ ಕೋರ್ಸ್ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸರಿಯಾಗಿ ತಿಳಿದುಕೊಳ್ಳುವುದು.

1) ಅಭ್ಯರ್ಥಿಗಳು ಇಚ್ಛೆ (Option) ಗಳನ್ನು ಸಲ್ಲಿಸಿದ ಮಾತ್ರಕ್ಕೆ ಸೀಟಿನ ಆಯ್ಕೆಯಾಗಿದೆ ಎಂದು ಅರ್ಥವಲ್ಲ. ಮಂಡಳಿಯು ಅಭ್ಯರ್ಥಿಗಳ Rank, Category ಮತ್ತು ಸಲ್ಲಿಸಿರುವ ಶಾಲೆಗಳ ಆದ್ಯತೆಗಳ ಮೇಲೆ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ. ಆದ್ದರಿಂದ ಆನ್ ಲೈನ್‌ನಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಛೆ (Option) ಗಳನ್ನು ನಮೂದಿಸುವಾಗ ಜಾಗರೂಕತೆಯಿಂದ ತಾವು ಇಚ್ಛಿಸುವ ಎಷ್ಟು ಸಂಖ್ಯೆಯಲ್ಲಿ ಬೇಕಾದರೂ ಶಾಲೆಗಳ ವಿವರಗಳನ್ನು ಆದ್ಯತೆ ಮೇಲೆ ನಮೂದಿಸತಕ್ಕದ್ದು. ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಛೆ (Option) ಗಳನ್ನು ನಮೂದಿಸಲು ದಿನಾಂಕ: 27.08.2026 ರಿಂದ 30.08.2026 ರವರೆಗೆ ಅವಕಾಶವನ್ನು ಕಲ್ಪಿಸಲಾಗಿದೆ.

2) ದಿನಾಂಕ: 30-08-2026 ರವರೆಗೆ ತಮ್ಮ ಇಚ್ಛೆ (Option) ಗಳನ್ನು ನಮೂದಿಸಿರುವ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ: 31.08.2026 ರಂದು ಅಣಕು ಸೀಟುಗಳ (Mock Result) ಹಂಚಿಕೆಯನ್ನು ನೀಡಲಾಗುವುದು. ಆದರೆ ಇದು ಅಂತಿಮ ಹಂಚಿಕೆಯಾಗಿರುವುದಿಲ್ಲ. ಅಣಕು ಹಂಚಿಕೆಯ ನಂತರವೂ ಅಭ್ಯರ್ಥಿಗಳು ಇಚ್ಛಿಸಿದಲ್ಲಿ ದಿನಾಂಕ: 01.09.2026 ರಂದು ತಾವು ನಮೂದಿಸಿರುವ ಶಾಲೆಗಳನ್ನು ಬದಲಾವಣೆ ಮಾಡಿ ಮತ್ತೊಮ್ಮೆ ಆನ್‌ಲೈನ್‌ನಲ್ಲಿ ನಮೂದಿಸಲು ಅವಕಾಶವಿರುತ್ತದೆ.

ಮುಂದುವರೆದಿದೆ....

3) ಅಭ್ಯರ್ಥಿಗಳು ನಮೂದಿಸುವ ಅಂತಿಮ ಇಚ್ಛೆಗಳ ಆದಾರದ ಮೇಲೆ ದಿನಾಂಕ: 03.09.2026 ರಂದು ಶಾಲೆಗಳಿಗೆ ಹಂಚಿಕೆ ಮಾಡಲಾಗುವುದು. ಅಭ್ಯರ್ಥಿಗಳು ತಮಗೆ ಹಂಚಿಕೆಯಾದ ಶಾಲೆಗಳಿಗೆ ದಿನಾಂಕ: 09.09.2026 ರೊಳಗೆ ಮೂಲದಾಖಲೆಗಳೊಂದಿಗೆ ವರದಿ ಮಾಡಿಕೊಳ್ಳತಕ್ಕದ್ದು. ಮೂಲದಾಖಲೆಗಳಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಹಂಚಿಕೆಯಾಗಿರುವ ಸೀಟನ್ನು ಹಾಗೂ ವರದಿ ಮಾಡಿಕೊಳ್ಳದ ಸೀಟುಗಳನ್ನು ರದ್ದುಗೊಳಿಸಲಾಗುವುದು.

4) ಅಂತಿಮ ಸುತ್ತಿನ ಕೌನ್ಸಿಲಿಂಗ್ ಮುಗಿಯುವವರೆಗೆ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಹಾಗೂ ಮಂಡಳಿಯು ಹೊರಡಿಸುವ ಪ್ರತಿ ಸುತ್ತೋಲೆಗಳನ್ನು ವೀಕ್ಷಿಸಲು www.ksdneb.org ಜಾಲತಾಣದಲ್ಲಿ ಗಮನಿಸಬೇಕಾಗಿ ಸೂಚಿಸಿದೆ.

ಕಾರ್ಯದರ್ಶಿಗಳು 24/8/26

ಕ.ರಾ.ಶು.ಪ.ಮಂ. ಬೆಂಗಳೂರು.

24/08/2026